3) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಒಡೆತನದಲ್ಲಿರುವ ಪರಿಸರ ತರಬೇತಿ ಸಂಸ್ಥೆಯಿಂದ ಸಾರ್ವಜನಿಕರಿಗೆ ಉದ್ಯಮಿಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ತರಬೇತಿ ಮತ್ತು ವಿಚಾರಗೋಷ್ಠಿ ನೀಡುವುದು.

4) ಬೆಂಗಳೂರು ನಗರದ ಪ್ರಮುಖ ಸ್ಥಳಗಳಲ್ಲಿ ವಾಹನಗಳಿಂದ ಉಂಟಾಗುವ ವಾಯುವಿನ ಗುಣಮಟ್ಟವನ್ನು ಮಾಪನ ಮಾಡಿ ಜನಸಾಮಾನ್ಯರಿಗೆ ತಿಳಿಸಲು ಸ್ವಯಂಚಾಲಿತ ಮಾಪನದ ಸೂಚನಾ ಫಲಕಗಳನ್ನು ನಿರ್ಮಿಸುವುದು.

5) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ವಾಹಿನಿ ವಾಹನಗಳ ಮುಖಾಂತರ ಬೆಂಗಳೂರಿನ ಮುಖ್ಯ ವೃತ್ತಗಳಲ್ಲಿ ವಾಹನಗಳ ಚಾಲಕರಿಗೆ : ಮಾಲೀಕರಿಗೆ ಪ್ರಚಾರ ಮಾಡುವ ಮೂಲಕ ವಾಯು ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸುವುದು.

6) ರಾಜ್ಯದ ಪ್ರಮುಖ ಪತ್ರಿಕೆಗಳು ಹಾಗೂ ಕೆಲವು ಸಂಸ್ಥೆಗಳ ವಿಚಾರ ಸಂಕೀರಣ : ಸಮಾರಂಭಗಳು : ವಿಶೇಷ ಸಂಚಿಕೆಗಳಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಜಾಹಿರಾತುಗಳನ್ನು ನೀಡುವುದು.

7) ರಾಜ್ಯಾದ್ಯಂತ ನಡೆಯಂವ ಪರಿಸರ ಸಂರಕ್ಷಣೆಗೆ ಸಂಬಂಧಪಟ್ಟಂತೆ ವಿಚಾರ ಸಂಕೀರ್ಣಗಳು, ತಾಂತ್ರಿಕ ಅಧಿವೇಶನಗಳು, ವಿಚಾರ ಗೋಷ್ಠಿಗಳು ಹಾಗೂ ಮಂಡಳಿಯ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ಸಮಾರಂಭಗಳನ್ನು ನಡೆಸಲು ಸಹ ಪ್ರೋತ್ಸಾಹಿಸುತ್ತದೆ.

ಅಧ್ಯಕ್ಷರು :— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಮಂಡಿಸಲಾಯಿತು.

2. ಪ್ರಕಟಣೆ

ಅಧ್ಯಕ್ಷರು :— ಶ್ರೀ ಕೆ.ಎಸ್. ಈಶ್ವರಪ್ಪ, ವಿಧಾನಸಭಾ ಸದಸ್ಯರು ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರು, ಇವರು ದಿನಾಂಕ: 2-3-1999ರಂದು ಪತ್ರ ಬರೆದು ಮಾನ್ಯ ಸದಸ್ಯರಾದ ಶ್ರೀ ಹೆಚ್.ಎನ್. ನಂಜೇಗೌಡರವರನ್ನು ಪಕ್ಷದ ಶಿಸ್ತು ಉಲ್ಲಂಘನೆಯ ಹಿನ್ನಲೆಯಲ್ಲಿ ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ ಶ್ರೀ ಹೆಚ್.ಎನ್. ನಂಜೇಗೌಡ, ವಿಧಾನಸಭಾ ಸದಸ್ಯರು- ಇವರನ್ನು ಸದನದಲ್ಲಿ ಯಾವುದೇ ಪಕ್ಷಕ್ಕೆ ಸೇರದಿರುವ ಸದಸ್ಯ ಎಂದು ಪರಿಗಣಿಸುತ್ತೇನೆ.